ಸಂಪುಟ : 40 ಸಂಚಿಕೆ 135 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 11 ಜೂನ್ 2017 ಭಾನುವಾರ POST REG NO . L-2/RNP- 364/TMR/2015-17 ಪುಟಗಳು : 08 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



**ಅನ್ಯಭಾಷೆಗೆ ಅಡ್ಡಿಯಿಲ್ಲ; ಆದರೆ ಎಲ್ಲಾ ಶಾಲೆಗಳಲ್ಲೂ ಕನ್ನಡಭಾಷಾ ಕಲಿಕೆ ಕಡ್ಡಾಯ : ಸಿಎಂ ಸಿದ್ದರಾಮಯ್ಯ**

ವಿವರ : ಪುಟ 8




**ಜುಲೈ 1 ರಿಂದ ಐಟಿ ರಿಟರ್ನ್ಸ್, ಪ್ಯಾನ್‌ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಆಧಾರ್ ಕಡ್ಡಾಯ : ಸಿಬಿಡಿಟಿ**

ವಿವರ : ಪುಟ 8

**ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ : ಇಂದು ಮಧ್ಯಾಹ್ನ 3ಕ್ಕೆ ಭಾರತ – ದ.ಆಫ್ರಿಕಾ ನಡುವೆ ಪಂದ್ಯ**



₹55 Discount Per Gram
Gold 916 ₹ 2735/–
Silver ₹ 40600/–
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

## ಎತ್ತಿನ ಹೊಳೆ ಯೋಜನೆ : ಸಂತ್ರಸ್ಥರಿಗೆ ಪುನರ್‌ವಸತಿ ಕಲ್ಪಿಸುವ ಕುರಿತು ಸಭೆ

# ಬೈರಗೊಂಡ್ಲು ಜಲಾಶಯ: ಸ್ಥಳೀಯರ ಅಸಮಾಧಾನ

**ತುಮಕೂರು**

ಕೊರಟಗೆರೆ ತಾಲ್ಲೂಕಿನ ಬೈರಗೊಂಡ್ಲು ಗ್ರಾಮದಲ್ಲಿ ಎತ್ತಿನಹೊಳೆ ಯೋಜನೆಯಡಿಯಲ್ಲಿ ಜಲಾಶಯವನ್ನು ನಿರ್ಮಿಸಲು ಯೋಜಿಸಲಾಗಿದ್ದು ಭೂಪರಿಹಾರ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿದೆ. ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಎತ್ತಿನಹೊಳೆ ಯೋಜನೆಯಲ್ಲಿ ಕಾಮಗಾರಿಗಳು ಭರದಿಂದ ಸಾಗಿದ್ದು,ನೀರು ಸಂಗ್ರಹಣೆಗೆ ಉದ್ದೇಶಿಸಿರುವ ಬೈರಗೊಂಡ್ಲು ಸಂಗ್ರಹಾಗಾರದ ಸುತ್ತಮುತ್ತಲ ಹಳ್ಳಿಗಳಿಂದ ಅಸಮಾಧಾನ ವ್ಯಕ್ತವಾಗುತ್ತಿದೆ.

> ಬೈರಗೊಂಡ್ಲು ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ ಜಲಾಶಯದ ನೀರಿನಿಂದಾಗಿ ನಮ್ಮ ಜಿಲ್ಲೆಯ ಗಡಿಭಾಗದವರೆಗೂ ಮತ್ತು ಆಂಧ್ರದ ಕೆಲವು ಭಾಗಗಳವರೆಗೂ ಅಂತರ್ಜಲ ಅಭಿವೃದ್ಧಿಯಾಗುವ ಅವಕಾಶಗಳು ವಿಫುಲವಾಗಿವೆ.ಅದೂ ಅಲ್ಲದೆ ಪುನರ್ವಸತಿ ವಿಭಾಗದಡಿಯಲ್ಲಿ ಸಂತ್ರಸ್ಥರಿಗೆ ಉತ್ತಮ ರೀತಿಯ ಸೌಲಭ್ಯಗಳ ಜೊತೆ ಸಾಮಾಜಿಕ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸಲಾಗುವುದು ಎಂದು ವಿಶ್ವೇಶ್ವರಯ್ಯ ಜಲನಿಗಮದ ಜಯಪ್ರಕಾಶ್ ತಿಳಿಸಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಎತ್ತಿನಹೊಳೆ ಯೋಜನೆ ಕುರಿತಾದ ಜಿಲ್ಲಾ ಮಟ್ಟದ ಸಭೆಯಲ್ಲಿ ಪ್ರಾತ್ಯಕ್ಷಿಕೆ ವೀಕ್ಷಿಸುತ್ತಿರುವ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು ಚಿತ್ರ : ಸುರೇಶ್.ಟಿ.ಎಚ್.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ನೀರನ್ನು ಸಂಗ್ರಹಣೆ ಮಾಡಲು ಉದ್ದೇಶಿಸಲಾದ ಬೈರಗೊಂಡ್ಲು ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗಲಿರುವ ಗ್ರಾಮಗಳ ಸಂತ್ರಸ್ಥರಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳನ್ನು ಕಲ್ಪಿಸುವ ಕುರಿತಾದ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಜಯಚಂದ್ರ ಹಾಗೂ ಗೃಹಸಚಿವ ಡಾ.ಜಿ.ಪರಮೇಶ್ವರ ನೇತೃತ್ವದಲ್ಲಿ ಶನಿವಾರದಂದು ಕರೆಯಲಾಗಿತ್ತು.

ವಿಶ್ವೇಶ್ವರಯ್ಯ ಜಲನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಜಯಪ್ರಕಾಶ್ ಯೋಜನೆಗೆ ಸಂಬಂಧಿಸಿದಂತೆ ಸಭೆಗೆ ಮಾಹಿತಿ ನೀಡಿದರು.ವಿದ್ಯುದೀಕರಣ ಮತ್ತು ಕೆಲವು ತಾಂತ್ರಿಕ ಪ್ರಕ್ರಿಯೆಗಳು ಶೀಘ್ರವಾಗಿ ಮುಗಿದರೆ ಮುಂಬರುವ ಜನವರಿ ತಿಂಗಳಿನ ಅಂತ್ಯದೊಳಗೆ ಎತ್ತಿನಹೊಳೆಯ ನೀರು ಪೂರ್ವಾಭಿಮುಖವಾಗಿ ಬಯಲು ಸೀಮೆಯ ಕಡೆ ಹರಿಯುವುದನ್ನು ನಿರೀಕ್ಷಿಸಬಹುದು. ಈ ನಿಟ್ಟಿನಲ್ಲಿ ಮೇ ತಿಂಗಳ ಅಂತ್ಯದೊಳಗೆ ವೇದಾವತಿ ಕಣಿವೆಗೆ ನೀರಿನ ಹರಿವನ್ನು ತರುವ ಪ್ರಯತ್ನದಲ್ಲಿ ನಿಗಮವು ಕಾರ್ಯೋನ್ಮುಖವಾಗಿದೆ ಎಂದು ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಬೈರಗೊಂಡ್ಲು ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ ಜಲಾಶಯದ ನೀರಿನಿಂದಾಗಿ ನಮ್ಮ ಜಿಲ್ಲೆಯ ಗಡಿಭಾಗದವರೆಗೂ ಮತ್ತು ಆಂಧ್ರದ ಕೆಲವು ಭಾಗಗಳವರೆಗೂ ಅಂತರ್ಜಲ ಅಭಿವೃದ್ಧಿಯಾಗುವ »» 4ನೇ ಪುಟಕ್ಕೆ

## ಮದ್ಯವ್ಯಸನಿಗಳ ಚಿಕಿತ್ಸಾ ಕೇಂದ್ರದ ಮೇಲೆ ಪೊಲೀಸರ ದಾಳಿ

**ಕುಣಿಗಲ್**

ಪಟ್ಟಣದ ಮಿಷನ್ ಕಾಂಪೌಂಡ್‌ನಲ್ಲಿ ಹಲವು ವರ್ಷಗಳಿಂದ ಪರವಾನಗಿ ಪಡೆಯದೆ ಅನಧಿಕೃತವಾಗಿ ನಡೆಯುತ್ತಿದ್ದ ಹೊಸಜೀವನ ಎಂಬ ಮದ್ಯ ವ್ಯಸನ ಚಿಕಿತ್ಸಾ ಕೇಂದ್ರದ ಮೇಲೆ ಬೆಂಗಳೂರು ಮಾನವಹಕ್ಕುಗಳ ಆಯೋಗದ ಪೊಲೀಸರು ದಾಳಿ ಮಾಡಿ ಎಚ್ಚರಿಕೆ ನೀಡಿದ್ದಾರೆ.

ಸ್ಥಳೀಕ ಪೀಟರ್ ಎಂಬಾತ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗದಿದ್ದಾಗ, ಮಾನವಹಕ್ಕುಗಳ ಆಯೋಗಕ್ಕೆ ಹೊಸಜೀವನ ಸಂಸ್ಥೆಯ ಮೇಲೆ ದೂರು ನೀಡಿದ ಹಿನ್ನೆಲೆಯಲ್ಲಿ ಡಿ.ವೈ.ಎಸ್.ಪಿ. ಮುರುಳೀಧರ್ ಹಾಗೂ ಸಿಬ್ಬಂದಿಗಳು ದಿಢೀರ್ ದಾಳಿನಡೆಸಿ ಪರಿಶೀಲಿಸಿದಾಗ ಹೊಸಜೀವನ ಸಂಸ್ಥೆಯವರ ಬಳಿ ಸರ್ಕಾರದಿಂದ ಪರವಾನಿಗೆಯನ್ನು ಪಡೆಯದೆ ನಡೆಸುತ್ತಿರುವ ಮತ್ತು ಇತರೆ ದಾಖಲಾತಿಗಳು ಇಲ್ಲದಿರುವ ಬಗ್ಗೆ ತಿಳಿದುಬಂದಿದ್ದು ಅಲ್ಲದೆ ಚಿಕಿತ್ಸೆ ಪಡೆಯಲು ಬಂದವರ ಅನಿಸಿಕೆಯನ್ನು ಪಡೆಯುವ ಮೂಲಕ ಇದೊಂದು ಅನಧಿಕೃತ ಹಾಗೂ ಅವ್ಯವಸ್ಥೆಯಿಂದ ಕೂಡಿದೆ ಎಂದು ತಿಳಿದ ಅಧಿಕಾರಿಗಳು ಸೂಕ್ತ ದಾಖಲಾತಿಗಳನ್ನು ನೀಡುವಂತೆ ಎಚ್ಚರಿಕೆ ನೀಡುವ ಮೂಲಕ ಸ್ಥಳೀಯ ಪೊಲೀಸರು ಮತ್ತು ಸಂಬಂಧ ಅಧಿಕಾರಿಗಳಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಸ್ಥಳೀಕನ ದೂರಿನಲ್ಲಿ ಈ ಸಂಸ್ಥೆಯು ಮದ್ಯ ವ್ಯಸನಿಗಳನ್ನು ಕರೆತಂದು ಬೇಕಾಬಿಟ್ಟಿಯಾಗಿ ಆಶ್ರಯ ಕೊಡುವ ಮೂಲಕ ಅವರನ್ನ ಪ್ರಾಣಿಗಳಿಗಿಂತಲೂ ಕಡೆಯಾಗಿ ನೋಡಿಕೊಳ್ಳುವಂತಹ ಸ್ಥಿತಿಯಿದೆ, ಶುಚಿತ್ವಕ್ಕೆ ನೀರಿನ ಕೊರತೆ, ಶೌಚಾಲಯ ಸೇರಿದಂತೆ ಮಲಗಲೂ ಬರೀ ಚಾಪೆ ಇಕ್ಕಟ್ಟಾದ ಜಾಗದಲ್ಲಿ ಆರೋಗ್ಯಯುತವಾಗಿ ಮದ್ಯ ವ್ಯಸನಿಗಳನ್ನು ನೋಡಿಕೊಳ್ಳಲು ಸಾಧ್ಯವಿಲ್ಲ, ಆದ್ದರಿಂದ ಮಾನವಹಕ್ಕುಗಳಿಗೆ ಇಲ್ಲಿ ಸಂಪೂರ್ಣವಾಗಿ ಚ್ಯುತಿಬರುತ್ತಿದ್ದು ಕೂಡಲೆ ಈ ಸಂಸ್ಥೆಯ ಮೇಲೆ ಕ್ರಮ ಜರುಗಿಸಬೇಕೆಂದು ದೂರು ನೀಡಿದ ಹಿನ್ನೆಲೆಯಲ್ಲಿ ಆಯೋಗದ ಪೊಲೀಸರು ಆಗಮಿಸಿ ಪರಿಶೀಲಿಸಿ ಸ್ಥಳೀಯ ಪೊಲೀಸರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿ ತೆರಳಿದ್ದಾರೆ.



## ಪ್ರವಾಸ ಮುಗಿಸಿ ವಾಪಸ್ಸಾದ ಮೋದಿ

**ನವದೆಹಲಿ**

ಪ್ರಧಾನಮಂತ್ರಿ ನರೇಂದ್ರ ಮೋದಿ ಎರಡು ದಿನಗಳ ಕಜಕಿಸ್ತಾನ ಪ್ರವಾಸದ ನಂತರ ತವರಿಗೆ ಹಿಂತಿರುಗಿದ್ದಾರೆ. ಆಸ್ತಾನದಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಅವರು, ಚೈನಾ ಅಧ್ಯಕ್ಷ ಕ್ಷಿ ಜಿನ್ ಪಿಂಗ್ ಅವರನ್ನು ಒಳಗೊಂಡಂತೆ ಸಂಘಟನೆಯ ಸದಸ್ಯ ರಾಷ್ಟ್ರಗಳ ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಈ ಪ್ರವಾಸದಲ್ಲಿ ಪ್ರಧಾನ ಮಂತ್ರಿ, ಬಹುಪಕ್ಷೀಯ ರಾಜತಾಂತ್ರಿಕ ಮತ್ತು ದ್ವಿಪಕ್ಷೀಯ ಬಾಂಧವ್ಯ ಬಲವರ್ಧನೆ ಕುರಿತಂತೆ ಹೆಚ್ಚಿನ ಒತ್ತು ನೀಡಿದ್ದರು ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ಗೋಪಾಲ್ ಬಾಗ್ಲೆ ಟ್ವೀಟ್ ಮಾಡಿದ್ದಾರೆ.

2001ರಲ್ಲಿ ಈ ಸಂಘಟನೆ ಸ್ಥಾಪನೆ ನಂತರ ಮೊನ್ನೆ ಮೊದಲ ಬಾರಿಗೆ ಭಾರತ ಮತ್ತು ಪಾಕಿಸ್ತಾನ ಸೇರ್ಪಡೆಗೊಂಡವು. ಶಾಂಘೈ ಸಹಕಾರ ಸಂಘಟನೆಯ ಶೃಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ನರೇಂದ್ರ ಮೋದಿ, ಭಾರತಕ್ಕೆ ಈ ಸಂಘಟನೆಗೆ ಪ್ರವೇಶ ನೀಡಿರುವುದರಿಂದ, ಇಂದು ಪ್ರಾದೇಶಿಕವಾಗಿ ಎದುರಾಗಿರುವ ಭಯೋತ್ಪಾದನೆ ಹಾಗೂ ಇನ್ನಿತರ ಸವಾಲುಗಳನ್ನು ಎದುರಿಸಲು ಒಂದು ಹೊಸ ಅವಕಾಶ ಸಿಕ್ಕಂತಾಗಿದೆ ಎಂದರು.

ಪ್ರಾದೇಶಿಕವಾಗಿ ಸಂಪರ್ಕ ಸಾಧಿಸುವುದು ಮತ್ತು ಇದರಿಂದ ಪ್ರಮುಖವಾಗಿ ವ್ಯಾಪಾರ ಮತ್ತು ಹೂಡಿಕೆಗೆ ಪುಷ್ಟಿ ನೀಡಿದಂತಾಗುತ್ತದೆ ಎಂದು ಪ್ರಧಾನಮಂತ್ರಿ ತಿಳಿಸಿದರು.

ಭಯೋತ್ಪಾದನೆಯ ಬೆದರಿಕೆಯ ವಿರುದ್ಧ ಯಾವುದೇ ರೂಪದಲ್ಲಾದರೂ ಹೋರಾಡಬೇಕೆಂದು ಪ್ರಧಾನಮಂತ್ರಿ ಭಾವೋದ್ರಿಕ್ತವಾಗಿ ವಿಶ್ವ ನಾಯಕರಲ್ಲಿ ಮನವಿ ಮಾಡಿಕೊಂಡರು.

»» 4ನೇ ಪುಟಕ್ಕೆ

# ಶಿಕ್ಷಣದಲ್ಲಿ ಕನ್ನಡಿಗರ ಸಾಧನೆ ಮಹತ್ತರ

**ತುಮಕೂರು**

ಶಿಕ್ಷಣ ಕ್ಷೇತ್ರದಲ್ಲಿ ಕನ್ನಡಿಗರ ಸಾಧನೆ ಮಹತ್ತರವಾದುದು. ದೇಶದಲ್ಲಷ್ಟೇ ಅಲ್ಲದೆ ವಿದೇಶದಲ್ಲಿಯೂ ಹೆಚ್ಚು ಸಾಧನೆ ಮಾಡುತ್ತಿರುವುದು ಕನ್ನಡಿಗರೇ ಎನ್ನುವುದು ಹೆಮ್ಮೆಯ ಸಂಗತಿಯಾಗಿದೆ. ಅಮೇರಿಕಾ, ಯೂರೋಪ್‌ನಂತಹ ದೇಶಗಳಲ್ಲಿ ತಾಂತ್ರಿಕ ತಜ್ಞರಾಗಿ ಹೆಚ್ಚು ಕೆಲಸ ಮಾಡುತ್ತಿರುವವರಲ್ಲಿ ಕನ್ನಡಿಗರ ಪಾಲು ಹೆಚ್ಚಿದೆ ಎಂದು ಸಂಸದ ಎಂದು ಸಂಸದ ಎಸ್.ಪಿ.ಮುದ್ದಹನುಮೇಗೌಡ ತಿಳಿಸಿದರು.

ಅವರು ತುಮಕೂರಿನ ವಿದ್ಯಾವಾಹಿನಿ ಪದವಿ ಪೂರ್ವ ಕಾಲೇಜಿನಲ್ಲಿ 2017-18 ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅವಧಿಯಲ್ಲಿ ಪಿಯುಸಿ ನಿರ್ಣಾಯಕ ಹಂತವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿಪ್ರಾಥಮಿಕಮತ್ತುಪ್ರೌಢಶಿಕ್ಷಣದವರೆಗೆ ಒಂದೇ ದಾರಿಯಲ್ಲಿ ವಿದ್ಯಾರ್ಥಿಗಳು ಸಾಗಿಬಂದರೆ, ಅವರ ಮುಂದಿನ ಆಯ್ಕೆಯ ಕ್ಷೇತ್ರಗಳು ಬದಲಾಗುವುದೇ ಪಿಯುಸಿಯಲ್ಲಿ. ಇಲ್ಲಿ ಶ್ರದ್ಧೆಯಿಂದ, ಆಸಕ್ತಿಯಿಂದ ವಿದ್ಯೆ ಕಲಿತರೆ ಭವಿಷ್ಯದಲ್ಲಿ ಸುಂದರವಾದ ಬದುಕನ್ನು




ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ ಶಿಕ್ಷಕರು ಮಾನಸಿಕವಾಗಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ರೀತಿ, ಅವರಿಗಿರುವ ಪರಿಜ್ಞಾನವನ್ನು ಹಿಂದಿನ ಶಿಕ್ಷಣಕ್ಕೆ ಹೋಲಿಸಿದರೆ ಇಂದು ಸಾಕಷ್ಟು ಸುಧಾರಣೆಯಾಗಿದೆ. ನಗರದಲ್ಲಿನ ಪೋಷಕರಂತೆ ಗ್ರಾಮೀಣ ಪೋಷಕರೂ ಕೂಡ ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರಿ ಶಾಲೆಗಳ ಜೊತೆಯಲ್ಲಿ ಖಾಸಗಿ ಸಂಸ್ಥೆಗಳೂ ಕೂಡ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಕನ್ನಡಿಗರ ಸಾಧನೆಗೆ ಕಾರಣವಾಗಿದೆ ಎಂದು ತಿಳಿಸಿದರು.

ಖ್ಯಾತ ಬರಹಗಾರ ಮತ್ತು ಪ್ರವಚನಕಾರರಾದ ಅರಳುಮಲ್ಲಿಗೆ ಪಾರ್ಥಸಾರಥಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ ವಿದ್ಯಾರ್ಥಿಗಳು ಮೊದಲು ಹಿಂಜರಿಕೆಯ ಮನೋಭಾವನೆಯನ್ನು ತೊರೆಯಬೇಕು. ಸಾಧನೆಗೆ ಮನಸ್ಸು ಮುಖ್ಯ. ಮನಸ್ಸೊಂದಿದ್ದರೆ ಶ್ರದ್ಧೆಯಿಂದ ಗಮನವಿಟ್ಟು ಕಲಿತು ಏನು ಬೇಕಾದರೂ ಸಾಧನೆಯನ್ನು ಮಾಡಬಹುದು. ಶಿಕ್ಷಕರು ಮಾಡುವ ಪಾಠಗಳನ್ನು ವಿದ್ಯಾರ್ಥಿಗಳು ಗಮನವಿಟ್ಟು ಕೇಳಿ, ಮನೆಯಲ್ಲಿ ಹಾರ್ಡ್ ವರ್ಕ್ ಮಾಡಿದರೆ ಪುಸ್ತಕದಲ್ಲಿರುವುದು ಮಸ್ತಕಕ್ಕೆ ಬರುತ್ತದೆ. ಅದಕ್ಕಾಗಿ »» 4ನೇ ಪುಟಕ್ಕೆ

# ವಿವಿಧ ಗ್ರಾಮಗಳಲ್ಲಿ ಕಾರ ಹಬ್ಬದ ಸಂಭ್ರಮ



**ಚಿಕ್ಕನಾಯಕನಹಳ್ಳಿ**

ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಶನಿವಾರ ಕಾರಬ್ಬದ ಸಂಭ್ರಮ ಕಂಡುಬಂದಿತು.

ಶನಿವಾರ ಸಂಜೆ ಪಟ್ಟಣದ ರೈತರು ಉಳುಮೆ ರಾಸುಗಳನ್ನು ಸಿಂಗರಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಸಿದ್ದರಾಮೇಶ್ವರಮಠ(ಕರಿದೇವರಮಠ), ಸಿದ್ದೇಶ್ವರ ಮಠ, ರೇವಣ್ಣಪ್ಪನ ಮಠಗಳಿಂದ ಹೊರಟ ರಾಸುಗಳು ಹಳೆಯೂರು ಆಂಜನೇಯಸ್ವಾಮಿ ದೇವಸ್ಥಾನದ ಮೂಲಕ ಪಟ್ಟಣದ ಪ್ರಮುಖ ರಾಜಬೀದಿಗಳಲ್ಲಿ ಒಟ್ಟಾಗಿ ರಾಸುಗಳ ಮೆರವಣಿಗೆ ನಡೆಯಿತು.

**ಶೆಟ್ಟಿಕೆರೆ** : ಸುಪ್ರಸಿದ್ದ ಶೆಟ್ಟಿಕೆರೆ ಕಾರಬ್ಬ ಸಂಪನ್ನಗೊಂಡಿತು, ಕರುಗಲ್ಲಿಗೆ ಕರೆ ಸೊಪ್ಪು ಕಟ್ಟುವುದು, ಮಿಣಿ ಸೇವೆ, ಕರಗ ಸ್ಥಾಪನೆ, ಬ್ರಹ್ಮಲಿಂಗಕ್ಕೆ 101ಪೂಜೆ, ಬಲಿಶಾಂತಿ, ಕರಗಪೂಜೆ ಹಾಗೂ ಕಾಲಭೈರವೇಶ್ವರಸ್ವಾಮಿ, ಕೆಂಪಮ್ಮದೇವಿ, ಬಸವೇಶ್ವರಸ್ವಾಮಿ ದೇವರುಗಳ ಉತ್ಸವ ನಡೆಯಿತು.

**ಕರಗ ಹೊಡೆಯುವ ಆಚರಣೆ** : ಜನರೆಲ್ಲಾ ರಾತ್ರಿ ಊರ ಮಧ್ಯದ ಕರುಗಲ್ಲು ಮಂಟಪದ ಬಳಿ ನೆರೆದರು. ಕರುಗಲ್ಲು ಮಂಟಪದ ಕೆಳಗೆ ಇರಿಸಿದ್ದ ಮಡಿಕೆಯಲ್ಲಿ ನೀರು ತುಂಬಿ ಭತ್ತ, ರಾಗಿ ಸಿರಿಧಾನ್ಯಗಳು, ದ್ವಿದಳ ಧಾನ್ಯಗಳನ್ನು ತುಂಬಿಸಲಾಯಿತು. ಬಳಿಕ ಮದಲಿಂಗನನ್ನು ಕರೆತಂದು ನೇಗಿಲು ಹೂಡಿ ಕರಗದ ಮೇಲೆ ಊಡಿದ್ದ ನೇಗಿಲನ್ನು ಆಯಿಸಲಾಯಿತು. ನೇಗಿಲು ಆಯಿಸಿದಾಗ ಯಾವ ಧಾನ್ಯ ಮುಂದಕ್ಕೆ ಚಿಮ್ಮಲ್ಪಡುತ್ತದೋ ಆ ಬೆಳೆ ಸುಭಿಕ್ಷವಾಗುತ್ತದೆ ಎಂಬ ನಂಬಿಕದೆ ಇದೆ. ಇದಲ್ಲದೆ ತಾಲ್ಲೂಕಿನ ಕಂದಿಕೆರೆ ಹಂದನಕೆರೆ ಹಾಗೂ ಹುಳಿಯಾರು ಭಾಗಗಳಲ್ಲಿ ಕಾರಬ್ಬ ವಿಜೃಂಭಣೆಯಿಂದ ನೆರವೇರಿತು

## ರಾಜ್ಯದ ಹಲವೆಡೆ ನೈರುತ್ಯ ಮುಂಗಾರು ಚುರುಕು

# ಕೃಷಿ ಚಟುವಟಿಕೆಗಳಲ್ಲಿ ನಿರತರಾದ ರೈತರು

**ಬೆಂಗಳೂರು**

ರಾಜ್ಯದ ಹಲವೆಡೆ ನೈರುತ್ಯ ಮುಂಗಾರು ಮಳೆ ಚುರುಕುಗೊಂಡಿದ್ದು, ಬಹುತೇಕ ಕಡೆಗಳಲ್ಲಿ ರೈತರು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಎಲ್ಲೆಡೆ ಉಳುಮೆ ಮಾಡಿ ಬಿತ್ತನೆ ಚಟುವಟಿಕೆಗೆ ಭೂಮಿಯನ್ನು ಹದಗೊಳಿಸಲಾಗುತ್ತಿದೆ. ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಎಲ್ಲೆಡೆ ಕಾರ್ಮೋಡ ಕವಿದಿದ್ದು, ಅಲ್ಲಲ್ಲಿ ಮಳೆಯಾಗುತ್ತಿರುವ ವರದಿಗಳು ಬಂದಿವೆ.

ಕರಾವಳಿಯಲ್ಲಿ ಮುಂಗಾರು ಚುರುಕಾಗಿದೆ. ಒಳನಾಡಿನ ಅಲ್ಲಲ್ಲಿ ಮಳೆಯಾಗಿದೆ. ರಾಜ್ಯದ ಕರಾವಳಿ ಪ್ರದೇಶದಲ್ಲಿ ಎರಡು ಭಾರೀ ಮಳೆ ಸುರಿಯುವ ಸಾಧ್ಯತೆ ಇದೆ. ಹೀಗಾಗಿ ಯಾವುದೇ ಮೀನುಗಾರರು ಮೀನುಗಾರಿಕೆಗೆ ಅಥವಾ ನದಿ ಪಾತ್ರಕ್ಕೆ ತೆರಳಬಾರದು. ತಗ್ಗುಪ್ರದೇಶ ಹಾಗೂ ನದೀ ತೀರದಲ್ಲಿ ವಾಸಿಸುವ ಸಾರ್ವಜನಿಕರು ನದಿ ಪಾತ್ರ, ನದಿ ಪಾತ್ರಕ್ಕೆ ತೆರಳ ಬಾರದು ಎಂದು ಸೂಚಿಸಿದೆ.

ಹೊನ್ನಾವರದಲ್ಲಿ 15 ಸೆಂಟಿಮೀಟರ್, ಶಿರಾಳಿ 14, ಕುಮಟಾ 11, ಮಂಕಿ 10, ಮಂಗಳೂರು, ಕಾರವಾರ, ಗೇರುಸೊಪ್ಪ ತಲಾ 8, ಕುಂದಾಪುರ 7, ಕೋಟಾ, ಕೊಲ್ಲೂರು, ಅಂಕೋಲದಲ್ಲಿ ತಲಾ 6, ಪಣಂಬೂರು, ಮಂಗಳೂರು ವಿಮಾನ ನಿಲ್ದಾಣ, ಸಿದ್ದರಾಪುರ, ನೇಲೋಗಿ, ಆಗುಂಬೆಯಲ್ಲಿ ತಲಾ 5 ಸೆಂಟಿಮೀಟರ್ ಮಳೆಯಾಗಿದೆ. ಹೈದರಾಬಾದ್ ಕರ್ನಾಟಕದ ರಾಯಚೂರು, ಕಲಬುರಗಿ, ಬೀದರ್ ಮತ್ತಿತರ ಕಡೆಗಳಲ್ಲೂ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿದೆ.

ಮುನ್ಸೂಚನೆಯಂತೆ ಕರಾವಳಿಯ ಬಹುತೇಕ ಹಾಗೂ ಒಳನಾಡಿನ ಬಹುತೇಕ ಪ್ರದೇಶಗಳಲ್ಲಿ ಮಳೆಯಾಗುವ ನಿರೀಕ್ಷೆಯಿದೆ. ಬೆಂಗಳೂರು ಸುತ್ತಮುತ್ತ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಒಂದೆರಡು ಬಾರಿ ಮಳೆಯಾಗುವ ನಿರೀಕ್ಷೆಯಿದೆ. ಮಧ್ಯ ಕರ್ನಾಟಕ ಭಾಗದಲ್ಲಿ ಬಿತ್ತನೆ ಕಾರ್ಯ ಚುರುಕುಗೊಂಡಿದ್ದು, ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಶೇ 25 ರಷ್ಟು ಬಿತ್ತೆಯಾಗಿರುವ ವರದಿಗಳು ಬಂದಿವೆ.

### ತುಮಕೂರಿನಲ್ಲಿಯೂ ಹರ್ಷ ತಂದ ಮಳೆ



**ತುಮಕೂರು**

ನಗರದಲ್ಲಿ ಮಧ್ಯಾಹ್ನ 3 ಗಂಟೆಯಿಂದ ಬಿದ್ದ ಮಳೆಗೆ ನಗರದ ಬಹುತೇಕ ಚರಂಡಿಗಳು ಸ್ವಚ್ಛಗೊಂಡವು. ಇದರಿಂದ ನಾಗರಿಕರಲ್ಲಿ ಮಂದಹಾಸ ಮೂಡಿತು.

ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾದ ಮಳೆ ಒಮ್ಮೊಮ್ಮೆ ಬಿರುಸಾಗಿ ಬಂದರೆ ಮತ್ತೆ ಕೆಲವು ಸಲ ತುಂತುರು ಮಳೆಯಾಯಿತು. ಸಂಜೆ 7 ಗಂಟೆಯಾದರೂ ಮಳೆ ಬಿಡದ ಕಾರಣ ಪ್ರಯಾಣಿಕರಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಯಿತು. ಕೆಲವು ಪ್ರಯಾಣಿಕರು ಆಟೋಗಳನ್ನು ಆಶ್ರಯಿಸಿದರೆ, ಮತ್ತೆ ಕೆಲವರು ಮಳೆಯಲ್ಲಿಯೇ ನಡೆದು ಬಸ್ ನಿಲ್ದಾಣ ತಲುಪುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.ಕೆಲವು ತಗ್ಗಿನ ಪ್ರದೇಶಗಳಲ್ಲಿ ವಾಸಿಸುವ ಮನೆಗಳವರು ಸ್ವಲ್ಪ ಮಟ್ಟಿಗೆ ತೊಂದರೆ ಅನುಭವಿಸಿದರೂ ಸಹ ಯಾವ ಅವಘಡಗಳೂ ಸಂಭವಿಸಲಿಲ್ಲ.

ನಗರದಲ್ಲಿ ಮೂರು ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ಆಗಾಗ್ಗೆ ಸುರಿಯುತ್ತಿರುವ ತುಂತುರು ಮಳೆಯಿಂದಾಗಿ ಮರಗಿಡಗಳು ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದು, ಅಲ್ಲಲ್ಲಿ ಗಿಡ ನೆಡುವ ಕಾರ್ಯ ಭರದಿಂದ ಸಾಗಿದೆ. ಇನ್ನು ಜಿಲ್ಲೆಯ ವಿವಿಧೆಡೆ ಕೂಡಾ ಮಳೆಯಾ ಗಿರುವ ಬಗ್ಗೆ ವರದಿಗಳು ಬರುತ್ತಿದ್ದು, ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಅಲ್ಪಸ್ವಲ್ಪ ಮಳೆಯಾಗಿರುವುದಾಗಿ ತಿಳಿದು ಬಂದಿದೆ. ಗಾಳಿ ಅಷ್ಟಾಗಿ ಇಲ್ಲದ್ದರಿಂದ ಮರ ಗಿಡಗಳು ನೆಲಕ್ಕುರುಳಿದ ಬಗ್ಗೆ ವರದಿಯಾಗಿಲ್ಲ.

## ಉಚಿತ ಹೆಬ್ಬೇವಿನ ಸಸಿ ವಿತರಣೆ

**ತುಮಕೂರು:** ಪವಿತ್ರಭೂಮಿ ಕೃಷಿಕರ ಒಕ್ಕೂಟದ ವತಿಯಿಂದ ತುಮಕೂರು ಜಿಲ್ಲಾದ್ಯಂತ ಇರುವ ಸಕ್ರಿಯ ಸದಸ್ಯ ರೈತರುಗಳಿಗೆ ಹೆಬ್ಬೇವು ಮತ್ತು ಸಿಲ್ವರ್‌ಓಕ್ ಸಸಿಗಳನ್ನು ವಿತರಿಸಲಾಗುತ್ತಿದ್ದು, ಒಕ್ಕೂಟದ ನಿರ್ದೇಶಕರಾದ ಕೆ.ಕುಮಾರ್ ರವರ 9449442407 ಮೊಬೈಲ್ ನಂಬರಿಗೆ ಸಂಪರ್ಕಿಸಬಹುದಾಗಿದೆ.

ಮಧುಮೇಹ ಪರೀಕ್ಷೆ ಉಚಿತ ಫಿಸಿಯೋತೆರಪಿ ಕ್ಯಾಂಪ್
ದಿನಾಂಕ 11-06-2017
ಬೆಳಗ್ಗೆ 7 ರಿಂದ ಮಧ್ಯಾಹ್ನ 1 ಗಂಟೆಯವರೆಗೆ
ಸ್ಥಳ: ಐ2ಎಸ್ ಡಯಾಬಿಟೀಸ್ ಷಾಪ್, (ನೆಲಮಹಡಿ)
ಸಿದ್ಧಗಂಗಾ ಡಯಾಗ್ನೊಸ್ಟಿಕ್ ಸೆಂಟರ್, ಬಿ.ಹೆಚ್.ರಸ್ತೆ, ತುಮಕೂರು
ಮೊ: 9449163544
ಆಯೋಜಕರು The Himalaya Drug Company

NTT 100% Job*
Nursery Teacher Training
Admissions Open for 17-18
Great Career Opportunity
» Age No Bar » 4G Abacus
» Spoken English Classes
WEEKEND CLASSES
» Free Hand Writing, Phonics & Spelling rule Classes
Free Calligraphy class for those who get admitted within 25 June 17
MONTESSORI, PLAY WAY, PROJECT & KINDERGARTEN METHODS
Eligibility: 10th pass / PUC Pass or Fail / Any Graduates
SOORYA NTT ACADEMY
Affiliated to all India Childhood Care and Education, New Delhi
(Recongnized by Govt of India)
Contact 0816- 2270433 94815 56549
Admin Office: 2nd Main, 6th Cross, Vijayanagar, Tumkur.

BIGGEST FURNITURE & AUTOMOBILE EXHIBITION
The Great Wheels
Maximum Brands Under One Roof
Date : 09-06-2017 TO 14-06-2017
FURNiTURE TODAY
Exhibition on Furniture, Interiors & Much More...
Huge Variety Big Discounts
Visit Today!
KNS Mill Ground, Kunigal Main Road, Tumkur.
(NEAR SBI BANK)

10.06.2017.indd 2 6/10/2017 11:26:51 PM